ದನಗಳಿದ್ದರೆ ತಾನೆ ಗಬ್ಬುನಾತ! ದಿಢೀರನೆ ಗೋಶಾಲೆಯೇ ಮಂಗಮಾಯವಾದಾಗ ಮೊಬ್ಬಳ್ಳಿ ಜನ ದಿಗ್ಭ್ರಾಂತರಾದರು. ಹಿಂ.ಜ.ತ.ಸೇನೆಯವರು ತಬ್ಬಿಬ್ಬು. ದೂರು ಗೌಡರನ್ನು ತಾಗಿತು. 'ಹೋಗ್ರಲೆ ಹೈಲು ನನ್ಮಕ್ಳಾ... ವಯಸ್ಸಾದೋರ್ನ ಇದ್ದಂತೋರೇ ವೃದ್ಧಾಶ್ರಮಕ್ಕೆ ಸೇರಿಸಿದ್ರೆ, ಗತಿಯಿಲ್ಲದವರು ತಾನು ತನ್ನ ಹೆಂಡ್ರು ಹೊಟ್ಟೆಹೊರೆಯೋದೇ ಕಷ್ಟವಾಗೇತಿ ಅಂತ ಬೀದಿಪಾಲು ಮಾಡೋ ಕಲಿಕಾಲ್ದಾಗೆ ಆ ಪೊಲೀಸಿನೋನು ಮುದಿ ದನಗಳ್ನ ಕಾಯ್ಬೇಕೇನ್ರಲಾ? ಕೇಂದ್ರದಾಗೆ ನಿಮ್ಮೋರು ಅದಾರೆ ಅಂತ ಲಿಮಿಟ್ ಮೀರಿದ್ರೋ ಮಗ್ಗಲು ಮುರಿಸಿಬಿಡ್ತೀನಿ ಹುಷಾರ್' ಎಂದು ಗೌಡರು ಸಡನ್ ಅಪ್ಸೆಟ್ ಆಗಿ ಬೊಬ್ಬಿರಿದರು. 'ಹಿಂಗೆ ಹೇಳಿದ್ರೆ ಬಿಟ್ಬಿಡ್ತೇವಾ? ಕೇಳ್ತೇವ್ರಿ ಆ ಪೊಲೀಸ್ನೋನ್ನ' ಎಂದು ಹಿಂ.ಜ.ತ. ಸೇನೆಪಡ್ಡೆಗಳೂ ಅಬ್ಬರಿಸಿ ನೇರವಾಗಿ ಠಾಣೆಗೇ ಬಂದಿಳಿದರು. ಎಸ್.ಐ. ಆರಾಮವಾಗಿ ಸಿಗರೇಟನ್ನೇ ಹುಕ್ಕಾ ರೀತಿ ಎಳೆಯುತ್ತಾ ಎಂಜಾಯ್ ಮಾಡುತ್ತಿದ್ದ. ಇವರು ದುರುಗುಟ್ಟಿ ದನಗಳೆಲ್ಲಿ ಎಂದು ಕೊಶ್ಚನ್ ಮಾಡಿದರು. 'ಲಾರಿಗಳಲ್ಲಿ ಅರ್ಲಿಮಾರ್ನಿಂಗ್ ಕಳುಹಿಸಿಕೊಟ್ಟೆ' ಎಂದು ದಾರಿಯಲ್ಲಿ ಬಿದ್ದ ಟಯರ್‌ಗಳ ಗುರುತು ತೋರಿದ. 'ಅದೇ ಕಣ್ರಿ ಎಲ್ಲಿಗೆ?' ಮುಖಂಡ ಗುರುಗುಟ್ಟಿದ. 'ಸಿಟಿನಲ್ಲಿರೋ ಗೋಶಾಲೆಗಳಿಗೆ ಕಳಿಸಿಕೊಡಿ ಅಂತ ಪಶುಸಂಗೋಪನಾ ಡಿಪಾರ್ಟ್‌ಮೆಂಟಿನೋರು ಸರ್ಕ್ಯುಲರ್ ಕಳಿಸಿದ್ದರು' ಎಂದು ಸೇನಾಪಡ್ಡೆಗಳ ಮೋರೆಯ ಮೇಲೆ ಹೊಗೆಯುಗಳಿದ ಎಸ್.ಐ. ರೊಚ್ಚು ತೀರಿಸಿಕೊಂಡ. ಸೇನೆಯವರಿಗೆ ದನಸಾಗಿಸೋರ್ನ ಹಿಡಿದು ಬಡಿದು ಪೊಲೀಸಿನವರಿಗೆ ಒಪ್ಪಿಸಿಯಷ್ಟೇ ಅರಿವಿದ್ದು ಸರ್ಕಾರಿ ಸರ್ಕ್ಯುಲರ್ರು, ಪ್ರೊಸೀಜರ್ ಕೋಡ್ಸು, ಜಿ.ಓ.ಗಳನ್ನು ಜನ್ಮಾಪಿ ಕನಿಷ್ಠ ಕಣ್ಣಿಂದ ನೋಡಿಯೂ ಅರಿಯದ ಹಿಂದುಳಿದ ಜನಾಂಗಕ್ಕೆ ಸೇರಿದ ದಗ್ಧರು, ಏನು ಮಾತನಾಡಬೇಕೋ ತೋಚದವರಾಗಿ 'ಥ್ಯಾಂಕ್ಸು... ಥ್ಯಾಂಕ್ಸು ಸಾ...' ಎಂದಲ್ಲಿಂದ ಕಳಚಿಕೊಂಡರು. ಪೇದೆಗಳು ಪುಸಕ್ಕನೆ ನಕ್ಕರು. ಮರುದಿನ ರಾತ್ರಿ ಲಾಯರ್ ಬಂದಿಳಿದ. 'ತಗೋ ನಿನ್ನ ಪಾಲು' ಎಂದು ನೋಟುಗಳನ್ನು ಎಣಿಸಿ ಟೇಬಲ್ ಮೇಲಿಟ್ಟ. ಎಸ್.ಐ. ಮುಖ ಮುಖ ನೋಡಿದ. 'ನಾವು ಮಾಡಿದ್ದು ನ್ಯಾಯವೆ?' ಕೇಳಿದ, 'ಇಲ್ಲಿದ್ದು ದಿನಾ ಬದುಕಿಯೂ ಸಾಯ್ತಿದ್ದ ದನಗಳಿಗೆ ಒಳ್ಳೆ ಸಾವೇ ಸಿಗುತ್ತೆ ಬಿಡಯ್ಯಾ. ಅವನ್ನು ಸೇರಿಸಬೇಕಾದ ಪ್ಲೇಸ್ಗೇ ಹೊತ್ತು ಹಾಕಿದ್ದೇನೆ' ಎಂದ ನಗುತ್ತಾ. 'ಡೋಂಟ್‌ವರಿ ಮಾರಾಯ' ಎಂದವನೆ ಕೋಟಿನ ಜೇಬಿನಲ್ಲಿದ್ದ ಬಾಟಲಿ ತೆಗೆದು ಮೇಜಿನ ಮೇಲಿಟ್ಟ. ಎಸ್.ಐ. 'ಬಿರಿಯಾನಿ ಪಾರ್ಸಲ್ ತಗಂಬರ್ರಲೆ,' ಎಂದು ಪೇದೆಗಳನ್ನು ಓಡಿಸಿದನಾದರೂ ತ್ರಿಬಲ್ ಎಕ್ಸ್ ರಮ್‌ನ ವಾಸನೆ ಮೀರಿ ಈಗಲೂ ಎಸ್.ಐ. ಮೂಗಿನ ಹೊಳ್ಳೆಗಳ ತುಂಬಾ ತುಂಬಿಕೊಂಡಿದ್ದು ಗಂಜಲ ಸ್ಮೆಲ್ಲೇ.

## ಬಿ.ಎಲ್. ವೇಣು

ಬಂಡಾಯದ ಕತೆ, ಕಾದಂಬರಿಗಳಿಂದ ತಮ್ಮ ಬರವಣಿಗೆ ಆರಂಭಿಸಿದ ವೇಣು 1976ರಿಂದ ಬರೆಯುತ್ತ ಬಂದಿದ್ದಾರೆ. 35ಕ್ಕೂ ಹೆಚ್ಚು ವರ್ಷಗಳಿಂದ ಸಿನಿಮಾ, ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು 7 ಐತಿಹಾಸಿಕ ಕಾದಂಬರಿಗಳು ಸೇರಿದಂತೆ 29 ಕಾದಂಬರಿಗಳನ್ನು ಬರೆದಿದ್ದಾರೆ. 'ಗಂಡುಗಲಿ ಮದಕರಿನಾಯಕ' ಅಪಾರ ಜನಮನ್ನಣೆ ಗಳಿಸಿದ ಐತಿಹಾಸಿಕ ಕಾದಂಬರಿ. 'ಲೋಕದಲ್ಲಿ ಜನಿಸಿದಾ ಬಳಿಕ...' ಅವರ ಆತ್ಮಕತೆ. ಅವರ ಸುಮಾರು 45 ಕೃತಿಗಳು ಪ್ರಕಟಗೊಂಡಿದ್ದು, 11 ಕೃತಿಗಳು ಸಿನಿಮಾ ಆಗಿವೆ. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ವೇಣು, ಪ್ರಸ್ತುತ ಚಿತ್ರದುರ್ಗದಲ್ಲಿ ನೆಲೆಸಿದ್ದಾರೆ.